# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯವಾಣಿ ಸ್ಥಾಪಿಸುವುದಕ್ಕೆ ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:AGRI-AML-108/2021, ದಿನಾಂಕ:17.04.2021.
2. ಸರ್ಕಾರದ ಆದೇಶ ಸಂಖ್ಯೆ:ಕೃಇ 73 ಕೃಕೈಉ ೨೦21, ದಿ:23.07.2021
3. ಕೃಷಿ ಆಯುಕ್ತರ ಪತ್ರ ಸಂಖ್ಯೆ:ಬೆಸವಿ/Helpdesk-07/2021-22, ದಿನಾಂಕ:20.05.2021.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದಲ್ಲಿ, ಬೆಳೆ ಸಮೀಕ್ಷೆ ಯೋಜನೆಯನ್ನು 2021-22ನೇ ಸಾಲಿನ ಮುಂದುವರೆದ ಯೋಜನೆಗಳಡಿ ಮುಂದುವರೆಸಲು ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಲ್ಲಿ 2021-22ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯು ಅಭಿವೃದ್ಧಿ ಪಡಿಸಿರುವ ಮಾರ್ಪಡಿಸಿದ ರೈತರ ಮೊಬೈಲ್ ಆಪ್ ಬಳಸಿಕೊಂಡು ಅನುಷ್ಠಾನಗೊಳಿಸಲು ಮಂಜೂರಾತಿಯನ್ನು ನೀಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದ ಕಂಡಿಕೆ (6) ರಲ್ಲಿ ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ತಂಡ (CSWG/PMU) ಹಾಗೂ ಬೆಳೆ ಸಮೀಕ್ಷೆ ಸಹಾಯವಾಣಿ (Help Desk), ಈ ಎರಡೂ ತಂಡಗಳು ಒಂದೇ ಕಚೇರಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ರ ಕೃಷಿ ಆಯುಕ್ತರ ಪತ್ರದಲ್ಲಿ, ಬೆಳೆ ಸಮೀಕ್ಷೆ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ತಂಡ (CSWG/PMU) ಹಾಗೂ ಬೆಳೆ ಸಮೀಕ್ಷೆ ಸಹಾಯವಾಣಿ (Help Desk), ಈ ಎರಡೂ ತಂಡಗಳು ಕೃಷಿ ಆಯುಕ್ತಾಲಯದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿದೆ. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೆಳೆ ಸಮೀಕ್ಷೆ ಸಹಾಯವಾಣಿ ತಂಡ ಕಳೆದ ಮೂರು ವರ್ಷಗಳಿಂದ ಬೆಳೆ ಸಮೀಕ್ಷೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ) ಹಾಗೂ ಕೃಷಿ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಕಾರ್ಯದಲ್ಲಿ ಅನುಭವವಿರುವ ಪ್ರಯುಕ್ತ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)ಯ ಅಭಿಪ್ರಾಯ ಪಡೆದು 2021-22ನೇ ಸಾಲಿನ ಬೆಳೆ ಸಮೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಸಲುವಾಗಿ ಹಿಂದಿನ ಸಾಲಿನಲ್ಲಿ ಪಡೆದಿದ್ದ ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಂದಲೇ Techno Commercial ದರಪಟ್ಟಿಯನ್ನು ಆಹ್ವಾನಿಸಲಾಗಿದ್ದು, ಸದರಿ ಸಂಸ್ಥೆಯು ಸಹಾಯವಾಣಿ ಸ್ಥಾಪಿಸಲು ಕೆಳಕಂಡಂತೆ ತಾಂತ್ರಿಕ ಮತ್ತು ಆರ್ಥಿಕ ದರಪಟ್ಟಿಯನ್ನು ಸಲ್ಲಿಸಿರುತ್ತದೆ ಎಂದು ತಿಳಿಸಲಾಗಿದೆ.

| Costing for Helpdesk Support | | | | |
|---|---|---|---|---|
| Sl. No. | Description | Quantity | Unit Cost / month | Total Amount |
| 1 | Cloud based Software with Virtual NO + Call forwarding with IVRS Facilities, call tracking, etc options | 1 | 40250 | 40250 |
| 2 | Technical Helpdesk Executives (per person with MCA/BE qualification) Per Person (Min 4 Resources required at the initial stage) with Infrastructure facilities with Laptops, Mobiles, Sims cards with unlimited outgoing call facilities, Printer and other stationeries, etc. | 8 | 70150 | 561200 |
| 3 | Manager who is an experienced computer graduates from BE or MCA for managing the helpdesk with Infrastructure facilities with Laptops, Mobiles, Sims cards with unlimited outgoing call facilities, Printer and other stationeries, etc. | 1 | 93150 | 93150 |
| | **Total Amount** | | | **694600** |
| | **GST @ 18%** | | | **125028** |
| | **Grand Total** | | | **819628** |
| Total per month: Rupees Eight Lakhs Nineteen Thousand Six Hundred and Twenty Eight Only | | | | |
| Total per year: Rupees Ninety Eight Lakhs Thirty Five Thousand Five Hundred and Thirty Six Only (Rs.98,35,536/-) | | | | |

ಸದರಿ ಅಂಶಗಳನ್ನು ಪರಿಗಣಿಸಿ, ಕೃಷಿ ಆಯುಕ್ತಾಲಯದಲ್ಲಿ ಸಹಾಯವಾಣಿ ತಂಡ ಸ್ಥಾಪಿಸಲು ಅನುಮತಿಯನ್ನು ನೀಡುವಂತೆ ಹಾಗೂ ಕಿಯೋನಿಕ್ಸ್ ಸಂಸ್ಥೆಯಿಂದ ಸ್ವೀಕೃತವಾಗಿರುವ ತಾಂತ್ರಿಕ ಮತ್ತು ಆರ್ಥಿಕ ದರಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಕೃಷಿ ಆಯುಕ್ತರು ತಮ್ಮ ಪ್ರಸ್ತಾವನೆಯಲ್ಲಿ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಕೃಇ-ಕೃಕೈಉ/76/2021, ಬೆಂಗಳೂರು, ದಿನಾಂಕ:18.09.2021.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಲ್ಲಿ, ರಾಜ್ಯದಲ್ಲಿ ಬೆಳೆ ಸಮೀಕ್ಷೆ ಕಾರ್ಯಕ್ರಮವನ್ನು ಸುಸೂತ್ರವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಕೃಷಿ ಆಯುಕ್ತಾಲಯದಲ್ಲಿ ತಾಂತ್ರಿಕ ಸಹಾಯವಾಣಿ (Help Desk) ತಂಡವನ್ನು ರೂ.98,35,536.00/- (ಕಿಯೋನಿಕ್ಸ್ ಸಂಸ್ಥೆಯ ತಾಂತ್ರಿಕ ಮತ್ತು ಆರ್ಥಿಕ ದರ ಪಟ್ಟಿ) ಮೊತ್ತದಲ್ಲಿ ಈ ಕೆಳಕಂಡ ವ್ಯವಸ್ಥೆಯಂತೆ ಸ್ಥಾಪಿಸಲು, ಅನುಮೋದನೆ ನೀಡಿ ಆದೇಶಿಸಿದೆ.

| Costing for Helpdesk Support | | | | |
|---|---|---|---|---|
| Sl. No. | Description | Quantity | Unit Cost / month | Total Amount |
| 1 | Cloud based Software with Virtual NO + Call forwarding with IVRS Facilities, call tracking, etc options | 1 | 40250 | 40250 |
| 2 | Technical Helpdesk Executives (per person with MCA/BE qualification) Per Person (Min 4 Resources required at the initial stage) with Infrastructure facilities with Laptops, Mobiles, Sims cards with unlimited outgoing call facilities, Printer and other stationeries, etc. | 8 | 70150 | 561200 |
| 3 | Manager who is an experienced computer graduates from BE or MCA for managing the helpdesk with Infrastructure facilities with Laptops, Mobiles, Sims cards with unlimited outgoing call facilities, Printer and other stationeries, etc. | 1 | 93150 | 93150 |
| | **Total Amount** | | | **694600** |
| | **GST @ 18%** | | | **125028** |
| | **Grand Total** | | | **819628** |
| Total per month: Rupees Eight Lakhs Nineteen Thousand Six Hundred and Twenty Eight Only | | | | |
| Total per year: Rupees Ninety Eight Lakhs Thirty Five Thousand Five Hundred and Thirty Six Only (Rs.98,35,536/-) | | | | |

ಸದರಿ ವೆಚ್ಚವನ್ನು 2021-22ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ:2401-00-110-0-07 ರಡಿ ಒದಗಿಸಲಾಗಿರುವ ಅನುದಾನದಿಂದ ಭರಿಸಲು ಸಹ ಸರ್ಕಾರದ ಅನುಮೋದನೆ ನೀಡಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಪಿ.ಸತ್ಯಭಾಮ)**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ (ಯೋಜನೆ)**

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕನಾ□ಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸಕಾ□ರದ ಅಪರ ಮುಖ್ಯ ಕಾಯ□ದಶಿ□ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸಕಾ□ರದ ಅಪರ ಮುಖ್ಯ ಕಾಯ□ದಶಿ□, ಸಿ.ಆ.ಸು(ಇ-ಆಡಳಿತ) ಇಲಾಖೆ.
4. ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು.
5. ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, 2 ನೇ ಮಹಡಿ, TTMC A ಬ್ಲಾಕ್, BMTC-ಶಾಂತಿನಗರ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ

******